# ನಿಲ್‌ದಾಣಗಳ ನಾದಲೀಲೆ

ಸದಾ ಹೂಬಿಡುವ ದಾಸವಾಳದಂತೆ ನನ್ನಲ್ಲಿ ಮತ್ತೆ ಮತ್ತೆ ಅರಳುವ ಬಯಕೆಗಳಲ್ಲಿ ಒಂದನ್ನು ನಿಮ್ಮಲ್ಲಿ ಬಿನ್ನವಿಸುವೆ. ಇದೆಂಥ ಬಯಕೆಯೆಂದು ನಿಮ್ಮಲ್ಲಿ ಕೆಲವರಿಗಾದರೂ ಅನ್ನಿಸೀತು. ನನ್ನ ಬಯಕೆಯನ್ನು ತಿಳಿದು ಕೆಲವರು ನಗಬಹುದು. ಇನ್ನು ಕೆಲವರಿಗೆ ಇದೆಂಥ ಹುಚ್ಚು ಅನ್ನಿಸಲೂಬಹುದು. ಬಸ್‌ಸ್ಟಾಂಡಿನಲ್ಲಿ ಸುಮ್ಮನೆ ಕುಳಿತು ಸಮಯವನ್ನು ವ್ಯಯಿಸುವುದು ನನಗೆ ಬಣ್ಣಿಸಲು ಅಸದಳವಾದ ಹರುಷವನ್ನು ನೀಡುತ್ತದೆ. ಹಾಗೆಯೇ ಹೊಸ ಹೊಸ ನಿಲ್‌ದಾಣಗಳನ್ನು ನೋಡುವ ಬಯಕೆ ನನ್ನೊಳಗೆ ಸದಾ ಹಸಿರಾಗಿರುತ್ತದೆ. ಇದು ತೇವ ಸಿಕ್ಕಲ್ಲಿ ಬೆಳೆಯುವ ಪಾಚಿಯ ಹಾಗೆ. ಸಣ್ಣದೊಂದು ನೆಪ ಸಿಕ್ಕರು ಸಾಕು, ನಿಲ್ದಾಣಗಳಲ್ಲಿ ಕಳೆಯುವ ಸುಖವನ್ನು ಕಳೆದುಕೊಳ್ಳಲಾರೆ. ಈಗಲೂ ನಾನು ದೂರದ ಪಯಣಕ್ಕೆ ಕೆಂಪು ವರ್ಣದ ಸಾಮಾನ್ಯ ಸಾರಿಗೆ ಬಸ್ಸನ್ನೇ ಅವಲಂಬಿಸಿದ್ದೇನೆ. ಏಕೆಂದರೆ, ಇದು ಹಲವು ಊರುಗಳ ನಿಲ್ದಾಣಗಳ ದರ್ಶನ ಮಾಡಿಸುತ್ತದೆ. ಅಲ್ಲಲ್ಲಿ ನಿಂತು ಆ ನಿಲ್ದಾಣದ ವಿಶೇಷವನ್ನು ಅರಿಯಲು ಅನುವು ಮಾಡಿಕೊಡುತ್ತದೆ. ಈ ಸುಖವನ್ನು ಯಾವ ಐಷಾರಾಮಿ ಸ್ಲೀಪರ್ ಬಸ್ಸುಗಳೂ ನೀಡಲಾರವು. ಅನಿವಾರ್ಯವಾದರೆ ಮಾತ್ರ ಸ್ಲೀಪರ್ ಬಸ್ಸಲ್ಲಿ ಪಯಣಿಸುವೆ. ಈ ಸ್ಲೀಪರ್ ಬಸ್ಸಲ್ಲಿ ನಿದ್ರೆ ಬರುವುದಿಲ್ಲ ಎಂಬುದೊಂದು ಕಾರಣ. ಇನ್ನೊಂದು, ಸುಮ್ಮನೆ ಹಣ ದಂಡವೆಂಬ ಪಿಳ್ಳೆ ನೆಪ. ಸ್ಲೀಪರ್‌ಕೋಚ್ ಎಂಬ ಪಿಶಾಚಿಯಿಂದ ತಪ್ಪಿಸಿಕೊಳ್ಳಲು ಒದಗುವ ಕಾರಣಗಳಿವು. ಇದನ್ನೇ ನೆಪವಾಗಿಸಿಕೊಂಡು ಸಾಮಾನ್ಯ ಸಾರಿಗೆಯಲ್ಲೇ ಪಯಣಿಸುವೆ.

ಸದಾ ಸಾಮಾನ್ಯ ಸಾರಿಗೆಯಲ್ಲಿ ಪಯಣಿಸುವುದು ಕೆಲವರಿಗೆ ಜಿಪುಣತನದ ಸಂಕೇತವಾಗಿ ಗೋಚರಿಸಿದೆ. ಕೆಲವು ಮಿತ್ರರು, ಬಂಧುಗಳು (ಹಿತಶತ್ರುಗಳು) ನನ್ನ ಈ ಸ್ವಭಾವವನ್ನು ಆಡಿಕೊಂಡು ನಕ್ಕಿದ್ದಾರೆ. ಇದನ್ನು ಹಲವರಿಗೆ ಹೇಳಿ ಸುಖಿಸಿದ್ದಾರೆ. ಇದು ನನಗೆ ತಿಳಿಯದ್ದೇನಲ್ಲ. ಲೋಕದ ಡೊಂಕು ನಾನ್ಯಾಕೆ ತಿದ್ದುವುದೆಂದು ಏನನ್ನೂ ಹೇಳದೆ ಸುಮ್ಮನಿರುವೆ.

